## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ

**ಸಿ.ಸಿ ಃ 2/2021**

ಸಾಕ್ಷಿದಾರರ ಹೆಸರು ಃ ಕಲ್ಪೇಶ್ ಕೆ ಎಸ್

ತಂದೆಯ ಹೆಸರು ಃ ಲೇಟ್ ಕೆ ಹೆಚ್ ಶಂಕರನಾರಾಯಣ

**ಪಿ.ಡಬ್ಲ್ಯೂ- 2**

ವಯಸ್ಸು ಃ **43** ವರ್ಷ

ಉದ್ಯೋಗ ಃ ಅಂಚೆ ಮೇಲ್ವಿಚಾರಕರು , ಮೂಡಿಗೆರೆ ಸಬ್ ಡಿವಿಷನ್

ವಾಸಸ್ಥಳ ಃ ಮೂಡಿಗೆರೆ

ದಿನಾಂಕಃ **18.02.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಃ ಫಿರ್ಯಾದುದಾರರ ಪರ ಶ್ರೀ. ಕೆ ಪಿ ಎಸ್ ವಕೀಲರಿಂದ ಃಃ

ನನ್ನ ಸಬ್ ಡಿವಿಷನ್ ನಲ್ಲಿ ಬಾಳೆಹೊನ್ನೂರು ಬರುತ್ತದೆ ಎಂದರೆ ಸರಿ. ಆರೋಪಿಯ ಅಂಚೆ ವಿಳಾಸಕ್ಕೆ ನಿಪಿ-5 ರಲ್ಲಿ ತೋರಿಸಿರುವ ಅಂಚೆ ನೊಂದಣಿ ಸಂಃ RK893817604IN ಮೂಲಕ ನೊಂದಾಯಿತ ಅಂಚೆ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿಕೊಟ್ಟಿರುವ ಸಂಬಂಧ ನಿಪಿ-6 ರಂತೆ Delivery Confirmed ಎಂದು Track Consignment ನೀಡಿರುತ್ತೇವೆಂದರೆ ಸರಿ. ನಿಪಿ-6 ರಂತೆ ಅಂಚೆ ನೊಂದಣಿ ಸಂಃ RK893817604IN ರ ಮೂಲಕ ಕಳುಹಿಸಿರುವ ಪತ್ರವು ಜಾರಿಯಾಗಿರುತ್ತದೆ ಎಂದರೆ ಸರಿ. ಅಂಚೆ ನೊಂದಣಿ ಸಂಃ RK893817604IN ರ ಮೂಲಕ ಕಳುಹಿಸಿರುವ ಪತ್ರವು ಕಣಬೂರು ಶಾಖಾ ಅಂಚೆ ಕಚೇರಿಗೆ ದಿನಾಂಕಃ 17.06.2020 ರಂದು ಬಂದಿದ್ದು, ಆರೋಪಿಗೆ ದಿನಾಂಕಃ 20.06.2020 ರಂದು ಜಾರಿ ಮಾಡಲಾಗಿರುತ್ತದೆ. ಸದರಿಯವರಿಗೆ ಪತ್ರವು ಜಾರಿಯಾಗಿರುವ ಸಂಬಂಧ ಕಚೇರಿ ಸ್ವೀಕೃತಿಯನ್ನು ಸಾಕ್ಷಿ ಹಾಜರುಪಡಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-8 ರಲ್ಲಿ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿ ಪರ ಶ್ರೀ.ಹೆಚ್ ಹೆಚ್ ಕೆ ವಕೀಲರಿಂದ ಃ

ಬಾಳೆಹೊನ್ನೂರಿನಲ್ಲಿ ಅಂಚೆ ಕಚೇರಿ ಇದೆ ಎಂದರೆ ಸರಿ. ಬಾಳೆಹೊನ್ನೂರು ಬಿ ಕಣಬೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಬಿ ಕಣಬೂರಿನಲ್ಲಿ ಅಂಚೆ ಕಚೇರಿ ಇದೆ ಎಂದರೆ ಸರಿ. ಅಂಚೆ ನೊಂದಣಿ ಸಂಃ RK893817604IN ಯು ಬಾಳೆಹೊನ್ನೂರು ಅಂಚೆ ಕಚೇರಿ ವ್ಯಾಪ್ತಿಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಾಳೆಹೊನ್ನೂರು ಸಬ್ ಕಚೇರಿಗೆ ಬಂದು ನಂತರ ಸಾಟ್ ಔಟ್ ಆಗಿ ಶಾಖಾ ಅಂಚೆ ಕಚೇರಿ ಬಿ ಕಣಬೂರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನೊಂದಾಯಿತ ಅಂಚೆ ಪತ್ರ ಬಂದರೆ ಅದಕ್ಕೆ ಸ್ವೀಕೃತಿ ಪತ್ರ ಇರುತ್ತದೆ ಎಂದರೆ ಸರಿ. ಸದರಿ ಸ್ವೀಕೃತಿ ಪತ್ರವು ನೊಂದಾಯಿತ ಅಂಚೆ ಯಾರು ಕಳುಹಿಸಿರುತ್ತಾರೋ ಅವರಿಗೆ ವಾಪಸ್ಸು ಬರಬೇಕು ಎಂದರೆ ಸರಿ. ಸದರಿ ಅಂಚೆ ನೊಂದಣಿ ಸಂಃ RK893817604IN ಗೆ ಸಂಬಂಧಿಸಿ ಸ್ವೀಕೃತಿ ಪತ್ರವು ಸೆಂಡರ್ ಗೆ ತಲುಪಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಅಂಚೆ ನೊಂದಣಿ ಸಂಃ RK893817604IN ಅಂಚೆಯು ಆರೋಪಿಗೆ ತಲುಪಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಂಚೆ ನೊಂದಣಿ ಸಂಃ RK893817604IN ಅಂಚೆಯು ವಿಜಯ್ ಕುಮಾರ್ ಪೋಸ್ಟ್ ಮಾಸ್ಟರ್ ರವರು ಆರೋಪಿಗೆ ಜಾರಿ ಮಾಡಿರುತ್ತಾರೆ. ಸದರಿ ಅಂಚೆಯನ್ನು ವಿಜಯ್ ಕುಮರ್ ರವರು ನೀಡಿರುವ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನಿಪಿ-8 ರ ಮೂಲಕ ಸದರಿ ವಿಜಯ್ ಕುಮಾರವರೇ ನೀಡಿರುತ್ತಾರೆಂದು ನುಡಿಯುತ್ತಾರೆ.

ನಾನು ನಿಪಿ-4, 5 , 6 ಮತ್ತು 8 ಆರೋಪಿಗೆ ನೊಂದಾಯಿತ ಅಂತೆ ಜಾರಿಯಾಗಿರುವ ಬಗ್ಗೆ ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4, 5, 6 ಮತ್ತು 8 ನಿಖಿಲ್ ಎನ್ನುವವರಿಗೆ ಸಂಬಂಧಪಟ್ಟ ಅಂಚೆಯಾಗಿರುತ್ತದೆ ಎಂದರೆ ಸರಿಯಲ್ಲ. ಬಾಳೆಹೊನ್ನೂರು ಅಂಚೆ ಕಚೇರಿಗೆ ಸಂಬಂಧಪಟ್ಟಂತೆ ಅಂಚೆ ನೊಂದಣಿ ಸಂಃ RK893817604IN ಪತ್ರವು ದಿನಾಂಕಃ 20.06.2020 ರಂದು ಆರೋಪಿಗೆ ಜಾರಿಯಾಗಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಃಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ